ಪಾಂಬು ಮುತ್ತು ಚಾಂಡಿಯೊಂದಿಗೆ ಮಾತನಾಡುತ್ತಿರುವುದನ್ನು ಕಂಡಿದ್ದ. ತಕ್ಷಣವೇ ಇನ್ಸ್‌ಪೆಕ್ಟರ್‌ನ ತನಿಖಾ ಮೆದುಳು ಕಾರ್ಯವೆಸಗಿತ್ತು. ಅದು ಪಾಂಬುವೇ ಆ ಪತ್ರವನ್ನು `ಮೇನಕಾ'ಗೆ ಬರೆದಿರುವುದು ಖಾತ್ರಿಯಾಗಿತ್ತು. ಜೊತೆಗೆ ಕನ್ನಡದ ಅಸ್ಪಷ್ಟ ಅಕ್ಷರಗಳ ಜೊತೆಗೆ ಮಲೆಯಾಳಂನ ಕೆಲವು ಅಕ್ಷರಗಳು ನುಸುಳಿದ್ದವು. ಇನ್ನು ಬಾಕಿ ಇರುವಂತಹದ್ದು ಪಾಂಬುವನ್ನು ರೆಡ್ ಹ್ಯಾಂಡಾಗಿ ಹಿಡಿದು ವಿಚಾರಿಸುವುದು. ಇದು ಸರಿಯಾದ ಸಮಯವೆಂದು ಕಾದು ಕುಳಿತಿದ್ದ ಇಲಾಖೆಗೆ ಪಾಂಬು ಮತ್ತೆ ಸಮುದ್ರ ದಂಡೆಗೆ ಹೊರಟಿರುವ ಸುಳಿವು ದೊರೆತಿತ್ತು.

ಲಕ್ಷ ಸಿಗುವ ಕನಸು ಕಂಡಿದ್ದ ಪಾಂಬು ತನ್ನ ಯೋಜನೆಯೆಲ್ಲಾ ತಲೆ ಕೆಳಗಾದಾಗ ನಿರಾಶನಾಗಿ `ಬಂಡೆ'ಗೆ ಕಾಕುಟ್ಟನ ಸಹಾಯ ಯಾಚಿಸಲು ಬಂದಿದ್ದ. ಆದರೆ ಕಾಕುಟ್ಟ ಹೈದರಾಬಾದ್‌ಗೆ ಹೋಗಿರುವ ಸುದ್ದಿ ತಿಳಿದು ಇನ್ನಷ್ಟು ಇಳಿದು ಹೋದವನು ಬಾಟಲಿಯ ದಾಸನಾದ.

ಪಾಂಬುವನ್ನು ಹುಡುಕಿಕೊಂಡ ಹೊರಟ ಇನ್ಸ್‌ಪೆಕ್ಟರ್ ರಾಜಧಾನಿ ಮತ್ತು ಪಿಸಿ ಸಾರಂಗ ಸಾಧ್ಯತೆಗಳನ್ನೆಲ್ಲಾ ಕಲೆ ಹಾಕಿಕೊಂಡು ಮರಳು ದಿಣ್ಣೆಯಲ್ಲಿ ಹೆಜ್ಜೆಯಿಡುತ್ತಿದ್ದಾಗ ಪಾಂಬುವಿನ ಕಾರು 'ಬಂಡೆ'ಯತ್ತ ಸಾಗಿದ್ದನ್ನು ನೋಡಿದರು.

ಪಾಂಬು 'ಬಂಡೆ'ಗೆ ಇಳಿದರೆ ತಕ್ಷಣವೇ ಹೊರಟು ಬಿಡುವ ಆಸಾಮಿಯಲ್ಲವೆನ್ನುವುದು ಖಾತ್ರಿಯಾಗಿತ್ತು. ಹಾಗಾಗಿ ಇಬ್ಬರೂ ನಿಧಾನವಾಗಿ ಹೆಜ್ಜೆಯಿಡುತ್ತಾ 'ಬಂಡೆ'ಯ ಬಳಿ ನಿಂತರು. ಮುಖ್ಯ ಬಾಗಿಲು ಮುಚ್ಚಿತ್ತು. ಪಿಸಿ ಇನ್ನೊಂದು ಬಾಗಿಲಿನ ಬಳಿ ಬಂದು ಅಧಿಕಾರಿಗೆ ಸುಳಿವು ಕೊಟ್ಟ.

ಇನ್ಸ್‌ಪೆಕ್ಟರ್ ರಾಜಧಾನಿ ಅತ್ತ ನಡೆದು ನಿಧಾನವಾಗಿ `ಬಂಡೆ'ಯ ಒಳಗೆ ನಡೆದ. ದೂರದಲ್ಲಿ ಪಾಂಬು ಒಬ್ಬನೆ ಕುಳಿತು ನಶೆಯೇರಿಸಿ ಕೊಳ್ಳುತ್ತಿದ್ದ. ಅಧಿಕಾರಿಗೆ ನಿರಾಶೆಯಾದರೂ ಪಾಂಬುವನ್ನು ಬಿಡಬಾರದೆಂದು ನಿರ್ಧರಿಸಿ ಅವನ ಎದುರು ಚೇರ್ ಎಳೆದು ಕುಳಿತ.

ಪಾಂಬು ಆ ಸದ್ದಿಗೆ ತಲೆಯೆತ್ತಿದ. ತನ್ನ ಮುಂದೆ ನಾಲ್ವರು ಪೊಲೀಸರು ನಿಂತಿರುವುದು ಕಂಡಿತು. ತಲೆ ಕೊಡವಿಕೊಂಡ. ಇಬ್ಬರು ತನ್ನೆದುರಿಗೆ ಕುಳಿತಿದ್ದರೆ ಇನ್ನಿಬ್ಬರು ಎದುರಿಗೆ ನಿಂತಿರುವಂತೆ ಕಂಡಿತು. ಪಾಂಬು ಅಧೀರನಾದ. ಆ ಸ್ಥಿತಿಯಲ್ಲಿಯೂ ಎದ್ದು ನಿಲ್ಲುವ ಪ್ರಯತ್ನ ಮಾಡಿದ. ಇನ್ಸ್‌ಪೆಕ್ಟರ್ ಅವನನ್ನು ಕುಳಿತುಕೊಳ್ಳುವಂತೆ ಸಂಜ್ಞೆಯಲ್ಲಿಯೇ ಸೂಚಿಸಿದ. ಪಾಂಬು ಬೆರಗು ಕಣ್ಣಿನಿಂದ ಅವರನ್ನೇ ನೋಡುತ್ತಾ ತೊದಲಿದ.

'ಕ್ಷಮಿಸಿ ಸಾರ್, ನೀವು ಇಷ್ಟು ಮಂದಿ ಬರ್ತೀರೀಂತ ಗೊತ್ತಿರ್ಲಿಲ್ಲ'

ಅಧಿಕಾರಿ ಮತ್ತು ಪಿಸಿ ಒಬ್ಬರ ಮುಖ ಒಬ್ಬರು ನೋಡಿಕೊಂಡರು. ಪಿಸಿ ಸಾರಂಗ ಮುಂದಕ್ಕೆ ಬಂದು ಕೈಯಲ್ಲಿದ್ದ ಕೋಲಿನಿಂದ ಅವನ ಗಲ್ಲವನ್ನು ಎತ್ತಿ ಹಿಡಿದು ಹೇಳಿದ.

'ಕುಡಿದ್ರೋದು ಹೆಚ್ಚಾದ್ರೆ ಹಾಗೆ ಆಗುತ್ತೆ. ಅಕ್ಕಲಿಲ್ಲದವರ ಹಾಗೆ ಮೂಗಿನ ತನಕ ಕುಡಿದಿದ್ದೀಯಲ್ಲ, ಯಾಕೆ?'

ಪಾಂಬು ಬೆಚ್ಚಿ ಬಿದ್ದವರಂತೆ ಪಿಸಿಯ ಕಣ್ಣುಗಳನ್ನು ನೋಡಿದ.

'ನನ್ನ ಪ್ಲಾನೆಲ್ಲಾ ಹಾಳಾಯ್ತು. ನಿಮಗೆ ನಾನು ಎಲ್ಲಾ ಹೇಳ್ತೀನಿ, ಬುದ'

ಕೈ ಜೋಡಿಸಿದ ಇಬ್ಬರತ್ತಲೂ. ಇನ್ಸ್‌ಪೆಕ್ಟರ್‌ನ ಸಂಜ್ಞೆಗೆ ಪಿಸಿ ಸಾರಂಗ ಕೂಡ ಪಾಂಬುಗೆ ಇದಿರಾಗಿ ಕುಳಿತ. ಪಾಂಬು ಕುಡಿದ ಮತ್ತಿನಲ್ಲಿ ಸತ್ಯವನ್ನೆಲ್ಲಾ ಹೇಳಿದ.

* * *

ಇನ್ಸ್‌ಪೆಕ್ಟರ್ ರಾಜಧಾನಿ ಪಾಂಬುವಿನ ಹೇಳಿಕೆಯನ್ನು ಕೇಳಿದ ಮೇಲೆ ಕೆಲವೊಂದು ಮುಖ್ಯವಾದ ವಿಷಯಗಳನ್ನು ದಾಖಲಿಸಿಕೊಂಡ. ಇಷ್ಟರ ತನಿಖೆಗೆ ಸಿಗದ ಮಾಹಿತಿ ಹಿತೇಶನದ್ದು. ಬರೀ ಮಾತಿನಲ್ಲಿಯೇ ಅವನ ಬಗ್ಗೆ ಕೆಲವೊಂದು ಕ್ಲೂಗಳನ್ನು ನೀಡುತ್ತಿದ್ದುದ್ದಲ್ಲದೆ ಬೇರೆ ಯಾವ ಮಾಹಿತಿಯನ್ನೂ ಕೊಟ್ಟಿರಲಿಲ್ಲ.

ಇನ್ಸ್‌ಪೆಕ್ಟರ್‌ಗೆ ಹಿತೇಶನನ್ನು ನೋಡುವ ಕುತೂಹಲವಿತ್ತು. ನೋಡುವುದಕ್ಕೆ ಕಿರಣನನ್ನು ಹೋಲುವಂತವನಾದರೆ ಅವನನ್ನು ಗುರುತಿಸುವುದು ಸುಲಭ. ಇನ್ನಷ್ಟು ಮಾಹಿತಿಗಳನ್ನು ಪ್ರಶ್ನಿಸೋಣವೆಂದರೆ ಪಾಂಬು ಸಮಂಜಸವಾಗಿ ಉತ್ತರಿಸುವ ಸ್ಥಿತಿಯಲ್ಲಿಲ್ಲ.

ಪಿಸಿ ಪಾಂಬು ಹೇಳಿದ ವಿಷಯಗಳನ್ನು ದಾಖಲಿಸಿದ ಕಾಗದವನ್ನು ಇನ್ಸ್‌ಪೆಕ್ಟರ್ ರಾಜಧಾನಿಯ ಕೈಯಲ್ಲಿಟ್ಟ. ಅಧಿಕಾರಿ ಅದರ ಮೇಲೆ ಕಣ್ಣೋಡಿಸಿ ಕೆಲವೊಂದು ತಿದ್ದುಪಡಿಗಳನ್ನು ಮಾಡುವಂತೆ ಸೂಚಿಸಿದ. ಪಿಸಿ ಅವುಗಳನ್ನು ಸರಿ ಪಡಿಸಿದ.

'ಬಂಡೆ'ಯ ಸಿಬ್ಬಂದಿಗಳ ನೋಟ ಪೊಲೀಸರ ಕಡೆಗಿತ್ತು. ಅವರು ವಿಚಿತ್ರವನ್ನು ದಿಟ್ಟಿಸುವಂತೆ ನೋಡುತ್ತಿದ್ದರು. ಅಲ್ಲಿ ಬೇರಾವ ಗಿರಾಕಿಗಳು ಇರಲಿಲ್ಲವಾಗಿ ತನಿಖೆಗೂ ಅನುಕೂಲವಾಗಿತ್ತು.

ಪಾಂಬು ಕುಡಿದ ಮತ್ತಿನಲ್ಲಿ ಸಂಪೂರ್ಣ ಮೇಜಿಗೆ ತಲೆಯಾನಿಸಿ ಮಲಗಿದ. ಇನ್ಸ್‌ಪೆಕ್ಟರ್ ಅವನನ್ನು ಆ ಸ್ಥಿತಿಯಲ್ಲಿ ಕಂಡು ಬೇಸರವಾದರೂ ತನ್ನ ಕರ್ತವ್ಯದ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳುವಂತಿರಲಿಲ್ಲ. ಬೇರೆ ಯಾರೇ ಆಗಿದ್ದರೂ ನಾಲ್ಕು ತದಕಿ ಬಿಡುತ್ತಿದ್ದ.

ಇನ್ಸ್‌ಪೆಕ್ಟರ್ ಪಿಸಿ ಸಾರಂಗನಿಗೆ ಹೊರಡುವ ಸೂಚನೆ ನೀಡಿದ. ಇಬ್ಬರೂ ಹಿಂಭಾಗದ ಬಾಗಿಲಿನಿಂದ ಹೊರಗೆ ಬಿದ್ದರು. ಅಧಿಕಾರಿಗೆ ಕಾಕುಟ್ಟ ಅಲ್ಲಿಲ್ಲದ್ದು ಆಶ್ಚರ್ಯ ತರಿಸಿತ್ತು. ಅವನಿಗೆ ದೊರೆತ ಮಾಹಿತಿಯಂತೆ ಕಾಕುಟ್ಟ ಹೈದರಾಬಾದ್‌ಗೆ ಹೋಗಿರುವ ಸಂಗತಿ ತಿಳಿದಿದ್ದು. ಭುಜಂಗೇಶರಾಯರು ಕೂಡ ಹೈದರಾಬಾದ್‌ಗೆ ಫಾರ್ಮ್‌ನ ಕೆಲಸದ ನಿಮಿತ್ತ ಹೋಗಿದ್ದರು. ಕಾಕುಟ್ಟ ಅವರನ್ನು ಹಿಂಬಾಲಿಸಿ ಹೋಗಿರುವನೇ? ಅಧಿಕಾರಿಯ ತಲೆಗೆ ಪ್ರಶ್ನೆಯೊಂದು ಸುಳಿಯಿತು. ತಕ್ಷಣವೇ ಅದನ್ನು ತಿಳಿದುಕೊಳ್ಳುವ ಸಲುವಾಗಿ ಪಿಸಿಯನ್ನು ಕರೆದ. ಸ್ವಲ್ಪ ಮುಂದಕ್ಕೆ ನಡೆದಿದ್ದ ಪಿಸಿ ಅಧಿಕಾರಿಯ ಕರೆಗೆ ಹಿಂದಕ್ಕೆ ಬಂದ. ಬಂಡೆಯ ಅಂಚಿನಿಂದಲೇ ಸಾಗುವ ಟಾರು ರಸ್ತೆಯಲ್ಲಿ ಇಬ್ಬರೂ ಮುನ್ನಡೆದರು.

'ಪಿಸಿ, ನೀನು ತಕ್ಷಣವೇ 'ಮೇನಕಾ'ಗೆ ಕರೆ ಮಾಡಿ ಭುಜಂಗೇಶರಾಯರ ಬಗ್ಗೆ ತಿಳಿದುಕೊಳ್ಳಬೇಕು. ನಂಗ್ಯಾಕೋ ಈ ಕಾಕುಟ್ಟನ ಮೇಲೆ ಅನುಮಾನ'

ಪಿಸಿ ತಲೆ ಕೆರೆದುಕೊಂಡ. ಅವನು ತಲೆ ಕೆರೆದುಕೊಂಡಾಗಲೆಲ್ಲಾ ಅವನು ಖಾಲಿಯಾಗಿರುವ ಸೂಚನೆ.

'ನಿನ್ನ ತಲೆ ಆ ನಿಟ್ಟಿನಲ್ಲಿ ಓಡುತ್ತಿಲ್ಲವಲ್ಲವೆ? ಸರಿ, ಅದನ್ನು ಆಮೇಲೆ ಯೋಚಿಸುವಿಯಂತೆ. ಈಗ ಫೋನ್ ಮಾಡಿ ವಿಚಾರಿಸು'

ಪಿಸಿ ಒಪ್ಪಿಕೊಂಡ. ಇಬ್ಬರೂ ಟಾರ್ ರಸ್ತೆಯಲ್ಲಿ ನಡೆದು ಸ್ವಲ್ಪ ಮುಂದೆ ಸಾಗುತ್ತಲೇ ನಡಿಗೆಯ ವೇಗವನ್ನು ಹೆಚ್ಚುಗೊಳಿಸಿದರು. ಗಾಳಿ ಮರದ ತೋಪಿನ ಬಳಿ ಬರುತ್ತಿದ್ದಂತೆ ಹಿಂದಿನಿಂದ ಯಾರೋ ಕೂಗಿದಂತಾಯಿತು. ಇಬ್ಬರ ದೃಷ್ಟಿಯೂ ಅತ್ತ ಸುಳಿಯಿತು. ಮೀನಿಗೆ ತೆರಳಿದ ದೋಣಿ ದಡಕ್ಕೆ ಚಿಮ್ಮಿ ಬರುತ್ತಿತ್ತು. ಅದರಿಂದ ಇಳಿದ ಮೂವರು ವ್ಯಕ್ತಿಗಳು ಪೊಲೀಸರನ್ನು ಕಂಡು ಕೂಗು ಹಾಕಿದ್ದರು.

ಇನ್ಸ್‌ಪೆಕ್ಟರ್‌ಗೆ ಆಶ್ಚರ್ಯವಾಗಿತ್ತು. ತಮ್ಮಿಂದ ಅವರಿಗೆ ಏನು ಅಗತ್ಯವಿದೆಯೆನಿಸಿತು. ದೋಣಿ ಲಂಗರು ಹಾಕಿ ಮರಳಿನ ದಡದಲ್ಲಿ ನಿಂತಿತು. ಮೂರು ಮಂದಿಯೂ ಗಾಳಿ ಮರದ ತೋಪಿನತ್ತ ನಡೆದು ಬರುತ್ತಿದ್ದರು. ಇನ್ಸ್‌ಪೆಕ್ಟರ್ ರಾಜಧಾನಿಯ ಮುಖದಲ್ಲಿ ಪ್ರಶ್ನಾರ್ಥಕ ಚಿನ್ಹೆಯಿತ್ತು. ಮುಖ ಕೂಡ ಗಂಭೀರವಾಗಿತ್ತು.

'ಸಾಹೇಬ್ರೆ, ನಮಸ್ಕಾರ' ಒಬ್ಬಾತ ಮುಂದಕ್ಕೆ ಬಂದು ಇನ್ಸ್‌ಪೆಕ್ಟರ್‌ಗೆ ಗೌರವ ಸೂಚಿಸಿದ. ಇನ್ಸ್‌ಪೆಕ್ಟರ್ ಪ್ರತಿವಂದಿಸಿದ ಮೇಲೆ ಏನನ್ನೋ ಹೇಳಬೇಕೆನ್ನುವ ಅವನ ತುಡಿತವನ್ನು ಅರ್ಥೈಸಿಕೊಂಡ ಇನ್ಸ್‌ಪೆಕ್ಟರ್.

'ಏನು ವಿಷ್ಯ? ನಿಮ್ಮ ದೋಣಿಗೆ ಏನೂ ಆಗಿಲ್ಲ ತಾನೆ?'

ಅವರು ಮೂವರೂ ಒಬ್ಬರ ಮುಖ ಒಬ್ಬರು ನೋಡಿಕೊಂಡರು. ಜೊತೆಗೆ ಮುಂದೆ ಬಂದಾತ ಏನೂ ಆಗಿಲ್ಲವೆನ್ನುವಂತೆ ತಲೆಯಲುಗಿಸಿದ.

'ಅಲ್ಲೊಂದು ದೋಣಿ ಇದೆ. ಹಾಳಾದ ದೋಣಿ ಅದು' ಆತ ಏನೋ ರಹಸ್ಯವನ್ನು ಹೇಳುವಂತೆ ದೂರಕ್ಕೆ ಕೈ ಚಾಚಿ ದಂಡೆಯ ಮೇಲೆ ಬಿದ್ದುಕೊಂಡಿದ್ದ ದೋಣಿಯತ್ತ ಕೈ ಮಾಡಿದ.

ಇನ್ಸ್‌ಪೆಕ್ಟರ್ ರಾಜಧಾನಿಯಂತೆ ಪಿಸಿ ಸಾರಂಗನಿಗೂ ಅದೇನೆಂದು ತಿಳಿಯಲಿಲ್ಲ. ಇಬ್ಬರ ದೃಷ್ಟಿಯೂ ಅತ್ತ ಸರಿಯಿತು.

'ಪಾಂಬುಗೆ ಸೇರಿದ ದೋಣಿ ಅದು'

ಇಬ್ಬರೂ ವಿಚಿತ್ರ ನೋಡುವವರಂತೆ ಅದರತ್ತ ನೋಡಿದರು. ಇಷ್ಟು ದಿನ ಮರಳು ದಿಣ್ಣೆಯ ಮೇಲೆ ಓಡಾಡುವಾಗ ಅದನ್ನು ನೋಡಿದ್ದರೂ ಅವರ ವಿಶೇಷ ಗಮನ ಅದರ ಮೇಲೆ ಹೋಗಿರಲಿಲ್ಲ.

'ಅದರಲ್ಲೇನು ವಿಶೇಷವಿದೆ? ಒಡಕು ದೋಣಿಯಲ್ಲವೆ?'